**ದಿನಾಂಕ:15.02.2014ರಂದು ನಿರ್ದೇಶಕರು, ಮಿಮ್ಸ್ ಮಂಡ್ಯ ಇವರ ಅಧ್ಯಕ್ಷತೆಯಲ್ಲಿ 2013-14 ನೇ ಸಾಲಿನ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಭಾಗಗಳ ಪ್ರಾಧ್ಯಾಪಕರು/ಮುಖ್ಯಸ್ಥರುಗಳು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ನಡೆದ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ, ನಿರ್ದೇಶಕರು ಉಪಸ್ಥಿತರಿದ್ದ ವಿಭಾಗಗಳ ಪ್ರಾಧ್ಯಾಪಕರು/ಮುಖ್ಯಸ್ಥರುಗಳನ್ನು ಸಭೆಗೆ ಸ್ವಾಗತಿಸಿದರು.

1) 2013-14ನೇ ಸಾಲಿನಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಸ್ಥೆಯ ವಿಭಾಗಗಳು ಎಲ್ಲಾ ರೀತಿಯಲ್ಲಿಯೂ ಸಿದ್ಧತೆಯನ್ನು ಮಾಡಿಕೊಳ್ಳುವಂತೆ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

2) ಸಂಸ್ಥೆಯ RDL (Regional Diagnosis Lab) ಗೆ ಸಂಬಂಧಿಸಿದಂತೆ ವಿಭಾಗಗಳ ಮುಖ್ಯಸ್ಥರು ಅವಶ್ಯಕವಾಗಿ ಬೇಕಾಗುವಂತಹ ಇಂಡೆಂಟ್‌ಗಳನ್ನು ಕಛೇರಿಗೆ ಶೀಘ್ರವಾಗಿ ಸಲ್ಲಿಸಲು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

3) ಪರೀಕ್ಷೆಗಳು ಸಮೀಪಿಸುತ್ತಿರುವ ಹಿನ್ನಲೆಯಲ್ಲಿ, ತಾವು ಹಾಗೂ ತಮ್ಮ ಅಧೀನದಲ್ಲಿರುವ ಸಿಬ್ಬಂದಿಗಳಿಗೆ ಅನಗತ್ಯವಾಗಿ ರಜೆ ಮಂಜೂರು ಮಾಡಬಾರದಾಗಿ ಹಾಗೂ ಅತಿ ತುರ್ತು ಸಂಧರ್ಭವಿದ್ದಲ್ಲಿ ಮಾತ್ರ ರಜೆ ಮಂಜೂರು ಮಾಡಲು ಶಿಫಾರಸ್ಸು ಮಾಡುವಂತೆ ನಿರ್ದೇಶಕರು ಸೂಚಿಸಿದರು.

4) ಪ್ರಾಧ್ಯಾಪಕರು/ ಮುಖ್ಯಸ್ಥರುಗಳು ಹಾಗೂ ವೈದ್ಯರುಗಳು ಪರೀಕ್ಷೆ ಕರ್ತವ್ಯಗಳ ಮೇರೆಗೆ (Exam Duty) ಹೊರ ರಾಜ್ಯಗಳಿಗೆ ತೆರಳುತ್ತಿದ್ದು, ಇದರಿಂದಾಗಿ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಆದುದರಿಂದ, RGUHS ನಿಯಮದಂತೆ ರಾಜ್ಯದಲ್ಲಿ ನಡೆಯುವಂತಹ ಪರೀಕ್ಷೆಗಳಿಗೆ ಮಾತ್ರ ಅವಶ್ಯವಿದ್ದಲ್ಲಿ ತೆರಳುವಂತೆ ಸೂಚಿಸಿ ತಮ್ಮ ಅಧೀನದಲ್ಲಿ ಬರುವ ಸಿಬ್ಬಂದಿಗಳಿಗೂ ಅದರಂತೆ ಸೂಚಿಸಲು ನಿರ್ದೇಶಕರು ತಿಳಿಸಿದರು.

5) ಪ್ರಾಧ್ಯಾಪಕರು/ಮುಖ್ಯಸ್ಥರುಗಳು ತಮ್ಮ ತಮ್ಮ ವಿಭಾಗಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಗಮನ ನೀಡುವಂತೆ ಹಾಗೂ RGUHS ಪರೀಕ್ಷೆಗಳಲ್ಲಿ ಸಂಸ್ಥೆಗೆ ಅತಿ ಹೆಚ್ಚು ಫಲಿತಾಂಶ ಒದಗಿಬರಲು ಹೆಚ್ಚಿನ ಶ್ರಮ ವಹಿಸುವಂತೆ ಪ್ರಾಧ್ಯಾಪಕರು/ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

6) ವೈದ್ಯರ ತರಬೇತಿಗೆ ಸಂಬಂಧಿಸಿದಂತೆ Medical Education Unit ನಲ್ಲಿ ನೊಂದಾವಣಿಯಾಗಿರುವಂತಹ ವೈದ್ಯರುಗಳಿಗೆ ಮಾತ್ರ ಹೊರಗಡೆ ತರಬೇತಿಗಾಗಿ ತೆರಳಲು ಅನುಮತಿಸಬಹುದಾಗಿ ಸಂಭಂಧಪಟ್ಟ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

**ಪ್ರತಿಯನ್ನು:**

1. ಪ್ರಾಧ್ಯಾಪಕರು/ಮುಖ್ಯಸ್ಥರು, ವಿಭಾಗ, ಮಿಮ್ಸ್ ಮಂಡ್ಯ ಇವರ ಮಾಹಿತಿಗೆ
2. ಕಛೇರಿ ಪ್ರತಿ.